O.S. 141/2019
P.W.1

**ಸಾಕ್ಷಿಯನ್ನು ದಿನಾಂಕಃ 04-04-2025 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.**

**ಮುಂದುವರೆದ ಪಾಟೀ ಸವಾಲು 1 ನೇ ಪ್ರತಿವಾದಿ ಪರ ವಕೀಲರಿಂದಃ**

4 ನೇ ಪ್ರತಿವಾದಿಯ ಮಕ್ಕಳ ಹೆಸರು ವಾಗ್ದೇವಿ, ಲಲಿತಾ ಮತ್ತು ರಮೇಶ್ ಎಂದು ಇರುವುದು. ನನ್ನ ಅಜ್ಜನಾದ ಕಾಳಪ್ಪನ ಹೆಸರಿನಲ್ಲಿ ಅಂದರೆ ಗುರುನಾಥಪ್ಪನ ತಂದೆಯ ಹೆಸರಿನಲ್ಲಿ ಒಟ್ಟು 80 ಎಕರೆ ಆಸ್ತಿ ಇತ್ತು. ನನ್ನ ತಂದೆಯವರು ನನಗೆ ಹೇಳಿದ್ದ ಪ್ರಕಾರ ನನ್ನ ತಂದೆ ಹಾಗೂ ಅವರ ಸಹೋದರರು 1965 ರಿಂದ 1970 ನೇ ಸಾಲಿನಲ್ಲಿ ಬೇರೆ ಬೇರೆಯಾದರು. 3, 5 ಮತ್ತು 6 ನೇ ಪ್ರತಿವಾದಿಯರು ಆ ಕಾಲದಲ್ಲಿ ಮೈನರ್ಸ್ ಆಗಿದ್ದರು ಎಂದರೆ ಸರಿ. ಮೈನರ್ ಆಗಿದ್ದಾಗಲೇ ಬೇರೆಯಾಗಿದ್ದಾರ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ಹಾಗೂ ಅವರ ಸಹೋದರರಾದ 3, 5 ಮತ್ತು 6 ನೇ ಪ್ರತಿವಾದಿಯರು ಯಾವತ್ತೂ ಬೇರೆಯಾಗಿರಲಿಲ್ಲ ಮತ್ತು ಏಕ ಕುಟುಂಬದಲ್ಲಿ ವಾಸವಿದ್ದರು ಎಂದರೆ ಸರಿಯಲ್ಲ. ಬೇರೆಯಾದ ಸಮಯದಲ್ಲಿ ನನ್ನ ಚಿಕ್ಕಪ್ಪನವರ ಹೆಸರಿಗೆ ಯಾವ ಯಾವ ಆಸ್ತಿಗಳು ಮತ್ತು ಎಷ್ಟೆಷ್ಟು ಆಸ್ತಿಗಳು ಬಂದಿವೆ ಎಂದು ನನಗೆ ಸಂಪೂರ್ಣವಾಗಿ ಗೊತ್ತಿರುವುದಿಲ್ಲ, ಆದರೆ ಸ್ವಲ್ಪ ಮಟ್ಟಿಗೆ ಗೊತ್ತಿದೆ.

ನನ್ನ ಅಜ್ಜನ ಹೆಸರಿನಲ್ಲಿ ಮನೆಗಳಿದ್ದವು. 1 ನೇ ಪ್ರತಿವಾದಿ ನನ್ನ ವಿಧ್ಯಾಭ್ಯಾಸ ಮತ್ತು ಉದ್ಯೋಗಕ್ಕೆ ಸಾಕಷ್ಟು ಹಣವನ್ನು ಖರ್ಚು ಮಾಡಿರುವರು ಎಂದರೆ ಸರಿಯಲ್ಲ. ನನಗೋಸ್ಕರ ಆತನು ಸಾಲ ಮಾಡಿದ್ದನು ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಕಾಳಪ್ಪನ ಎಲ್ಲಾ ವಾರಸುದಾರರಿಗೆ ಸಂಬಂಧಪಟ್ಟಿವೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ನನಗಾಗಿ ಮಾಡಿದ ಸಾಲವನ್ನು ನಾನು ತೀರಿಸಬೇಕಾಗುತ್ತದೆ ಎಂದು ಈ ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸರಿಯಿದೆ.**

04-04-2025

**ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ಹರಪನಹಳ್ಳಿ**

O.S. 141/2019
P.W.1